ಶ್ರೀ ಎಂ. ಪಿ. ಪ್ರಕಾಶ್.—ತಮ್ಮ ಕಳಕಳಿ ನನಗೆ ಅರ್ಥವಾಗಿದೆ. ಇಲಾಖೆಯ ಅಧಿಕಾರಿಗಳಿಗೆ ತಿಳಿಸುತ್ತೇನೆ. ರಸ್ತೆ ಬದಿಗಳಲ್ಲಿ ನಡೆಯುತ್ತಿರುವ ಅಕ್ರಮಗಳನ್ನು ಮಾಡಿಲ್ಲವೆಂದು ಹೇಳಿದ್ದಾರೆ. ಇಲಾಖೆಯ ಮುಖ್ಯಾಧಿಕಾರಿಗಳನ್ನು ಕರೆಸಿ ಅದರ ಬಗ್ಗೆ ಒಂದು ತಿಂಗಳೊಳಗೆ ವರದಿಯನ್ನು ತರಿಸಿಕೊಡಿ ಎಂದು ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರಿಗೆ ವಿನಂತಿ ಮಾಡುತ್ತೇನೆ.

ವಕ್ಫ್ ಆಸ್ತಿಯ ದುರುಪಯೋಗದ ತನಿಖೆಯ ಹಿನ್ನೆಲೆಯಲ್ಲಿ ಸದನದಲ್ಲಿ ಕೊಟ್ಟಿರುವ ಆಶ್ವಾಸನೆಯ ಬಗ್ಗೆ

೧೧೯೮. **ಶ್ರೀ ಮಲ್ಲೇರಗೌಡ ಎಸ್. ಪಾಟೀಲ್** (ಸಂಕೇಶ್ವರ).—ಮಾನ್ಯ ಗ್ರಾಮೀಣ ಅಭಿವೃದ್ಧಿ ಪಂಚಾಯತ್‌ರಾಜ್ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ವಕ್ಫ್ ಆಸ್ತಿಯನ್ನು ದುರುಪಯೋಗ ಮಾಡಿದ ಬಗ್ಗೆ ತನಿಖೆ ಮಾಡುವುದಕ್ಕಾಗಿ ಹೈಕೋರ್ಟ್ ನ್ಯಾಯಾಧೀಶರ ನೇಮಕಾತಿ ಮಾಡುವುದರಲ್ಲಿ ವಿಳಂಬವಾಗುತ್ತಿರುವುದಕ್ಕೆ ಕಾರಣವೇನು ?

ಆ) ಬೆಂಗಳೂರು, ಮೈಸೂರು ಹಾಗೂ ಇನ್ನುಳಿದ ಪ್ರದೇಶಗಳಲ್ಲಿ ಪಟ್ಟಭದ್ರ ಹಿತಾಶಕ್ತಿಗಳಿಂದ ವಕ್ಫ್ ಬೋರ್ಡಿನ ಆಸ್ತಿಯನ್ನು ಲಪಟಾಯಿಸಿರುವವರ ಮೇಲೆ ಸರ್ಕಾರವು ತೆಗೆದುಕೊಳ್ಳುವ ಕಾರ್ಯಕ್ರಮವೇನು ?

ಇ) ವಕ್ಫ್ ಬೋರ್ಡಿನ ಆಸ್ತಿಯನ್ನು ದುರುಪಯೋಗ ಮಾಡಿರುವ ಬೆಲೆ ಎಷ್ಟು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ, ಪಂಚಾಯತ್ ರಾಜ್ ಮತ್ತು ವಕ್ಫ್ ಸಚಿವರು).—

ಅ) ಮುಸ್ಲಿಂ ಕಾನೂನಿನಲ್ಲಿ ನುರಿತ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರ ಸೇವೆ ದೊರೆಯಲಾರದ್ದರಿಂದ ಆಯೋಗದ ರಚನೆ ವಿಳಂಬವಾಗಿದೆ.

ಆ) ಜಿಲ್ಲಾಧಿಕಾರಿಗಳಿಗೆ ವಕ್ಫ್ ಆಸ್ತಿಗಳ ಮೇಲಿನ ಅತಿಕ್ರಮಣಗಳನ್ನು ತೆಗೆದುಹಾಕಲು ಆದೇಶಿಸಿದೆ. ಈ ಬಗ್ಗೆ ಕ್ರಮ ಜಾರಿಯಲ್ಲಿದೆ.

ಇ) ವಿವರಗಳಿಲ್ಲ.

ಶ್ರೀ ಎಂ. ಎಸ್. ಪಾಟೀಲ್.—ಕಳೆದ ಬಾರಿ ಈ ವಿಷಯದಲ್ಲಿ ಪ್ರಶ್ನೆ ಎತ್ತಿದಾಗ ಮೂರು ಜನರ ಕಮಿಟಿಯನ್ನು ಮಾಡುತ್ತೇವೆಂದು ಹೇಳಿದ್ದೀರಿ. ಆದರೆ ಈಗ ಉಚ್ಚ ನ್ಯಾಯಾಲಯದ ನ್ಯಾಯಾಧೀಶರು ಸಿಗುತ್ತಿಲ್ಲವೆಂದು ಹೇಳಿದ್ದೀರಿ. ವಕ್ಫ್ ಬೋರ್ಡ್‌ನ ಆಸ್ತಿ ಎಷ್ಟು ದುರುಪಯೋಗವಾಗಿದೆ ಅದರ ಬೆಲೆ ಎಷ್ಟು ಎಂದು ಕೇಳಿದ್ದಕ್ಕೆ ವಿವರವಿಲ್ಲವೆಂದು ಹೇಳಿದ್ದೀರಿ. ಈ ರೀತಿ ಹೇಳುವುದಾದರೆ ಸರ್ಕಾರವೇಕೆ ಇರಬೇಕು ? ನಿವೃತ್ತ ನ್ಯಾಯಾಧೀಶರನ್ನು ನೇಮಕ ಮಾಡಿ ಎನ್‌ಕ್ವೈರಿ ಮಾಡುತ್ತೇವೆಂದು ಹೇಳಿದ್ದೀರಿ ಇಲ್ಲಿಯವರೆಗೆ ಅವರನ್ನು ನೇಮಕ ಮಾಡುವುದಕ್ಕೆ ಆಗಿಲ್ಲ ಇವೊತ್ತಿನ ದಿವಸ ಯಾರು ವಕ್ಫ್ ಖಾತೆಯನ್ನು ಹ್ಯಾಂಡಲ್ ಮಾಡುತ್ತಾರೆ ಅವರೂ ಕೂಡ ಇದರಲ್ಲಿ ಶಾಮೀಲಾಗಿದ್ದಾರೆಂದು ನಾವು ಆರೋಪ ಮಾಡಬೇಕಾಗುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ಪ್ರಶ್ನೆ ಕೇಳಿದರೂ ಕೂಡ ಉತ್ತರ ಸರಿಯಾಗಿ ಕೊಡದಿದ್ದರೆ ನಮಗೆ ತೊಂದರೆಯಾಗುತ್ತದೆ. ಮೂರು ವರ್ಷದ ಹಿಂದೆಯೇ ವಿವಾದಂತಹ ಎನ್‌ಕ್ವೈರಿಯಾಗಬೇಕಾಗಿತ್ತು ಮಂತ್ರಿಗಳು ವಿವರವಾಗಿ ಎನ್‌ಕ್ವೈರಿ ಮಾಡುವುದರಲ್ಲಿ ವಿಫಲರಾಗಿದ್ದಾರೆ, ಇದರ ಬಗ್ಗೆ ಏನು ವಿವರ ಕೊಡುತ್ತೀರೋ ಕೊಡಿ.

ಶ್ರೀ ಎಂ. ಪಿ. ಪ್ರಕಾಶ್.—ಯಾವುದೇ ಒಬ್ಬ ಶಾಸಕನಾದ ಮೇಲೆ ಆತನಿಗೆ ತಮ್ಮ ಮತದಾರ ಕ್ಷೇತ್ರದಲ್ಲಿ ಮತ್ತು ರಾಜ್ಯದ ಹಿತಾಸಕ್ತಿಗೆ ಸಂಬಂಧಪಟ್ಟಿರತಕ್ಕಂತಹ ಎಲ್ಲಾ ವಿಷಯಗಳಲ್ಲಿ ಸಂಪೂರ್ಣ ಅಧಿಕಾರವಿದೆ. ತಾವು ಈ ಧರ್ಮಕ್ಕೆ ಸಂಬಂಧಪಡದಿದ್ದರೂ ಕೂಡ ಅವರ ಕಳಕಳಿಯನ್ನು ಆರಿತು ಇದನ್ನು ಎತ್ತಿದ್ದೀರಿ. ಅವರ ಕಳಕಳಿಯನ್ನು ನಾನು ಸಂಪೂರ್ಣವಾಗಿ ಮೆಚ್ಚುತ್ತೇನೆ ನಿವೃತ್ತ ನ್ಯಾಯಾಧೀಶರು ಈ ಜವಾಬ್ದಾರಿಯನ್ನು ಹೊತ್ತುಕೊಳ್ಳಲಿಕ್ಕೆ ತಯಾರಿಲ್ಲದೇ ಇದ್ದುದರಿಂದಾಗಿ ಕಾಲ ವಿಳಂಬವಾಗಿದೆ. ಯಾರೂ ಇದನ್ನು ಪ್ರಯತ್ನ ಮಾಡಲಿಲ್ಲವೆಂದು ಅಲ್ಲ, ಪ್ರಯತ್ನ ಮಾಡಿದರೂ ಕೂಡ

ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರು ಈ ಜವಾಬ್ದಾರಿಯನ್ನು ಹೊತ್ತುಕೊಳ್ಳಲು ತಯಾರಿರಲಿಲ್ಲ. ನಿವೃತ್ತ ಜಿಲ್ಲಾ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ಶ್ರೀ ಮ್ಯಾನ್ ಕಮಿಟಿ ಮಾಡಬೇಕೆಂಬ ಯೋಚನೆ ಇದೆ ಅದನ್ನು ವಿಳಂಬ ಮಾಡದೇ ಆದಷ್ಟು ಬೇಗ ಮಾಡುವ ಪ್ರಯತ್ನ ಮಾಡುತ್ತೇನೆ. ವಕ್ಫ್ ಬೋರ್ಡ್‌ನವರು ಜಿಲ್ಲೆಗಳಲ್ಲಿ ಮಾಡಿರತಕ್ಕಂತಹ ಅನಧಿಕೃತವಾದ ಆಸ್ತಿಗಳನ್ನು ಮಾಡಿ ಕೊಂಡಿರುವ ಬಗ್ಗೆ ವಿವರಗಳು ಇವೆ ಬೆಂಗಳೂರು ವಿಭಾಗದಲ್ಲಿ–೩ ಚಿತ್ರದುರ್ಗ–೨೪ ತುಮಕೂರು–೩ ಶಿವಮೊಗ್ಗ–೨೦ ಕೋಲಾರ–೩೪ ಬೆಳಗಾಂ–೯ ಬಿಜಾಪುರ–೧೭ ಧಾರವಾಡ–೪ ಉತ್ತರ ಕನ್ನಡ–೨ ಗುಲ್ಬರ್ಗ–೭ ಬೀದರ್–೧೬ ರಾಯಚೂರು–೭ ಬಳ್ಳಾರಿ–೩ ಮೈಸೂರು–೭ ಮಂಡ್ಯ–೭ ಹಾಸನ–೧೮ ದಕ್ಷಿಣ ಕನ್ನಡ ಜಿಲ್ಲೆ–೨ ಕೊಡಗು–೨ ಚಿತ್ರದುರ್ಗ–೧೧ ಕೆಲವು ಪ್ರಕರಣಗಳ ಬಗ್ಗೆ ಕ್ರಮ ತೆಗೆದು ಕೊಂಡಿದೆ ಅದರ ವಿವರಗಳು ಈ ರೀತಿ ಇವೆ.

೧೦–೩೮ ಎ. ಯಂ.

ಅದರಲ್ಲಿ ಬೆಂಗಳೂರು ವಿಭಾಗದಲ್ಲಿ ೧, ಚಿತ್ರದುರ್ಗ ೧, ಮೈಸೂರು ಕಂದಾಯ ವಿಭಾಗದಲ್ಲಿ ಮಂಡ್ಯ ೫, ಹಾಸನ ೧, ದಕ್ಷಿಣ ಕನ್ನಡ ೨, ಕೊಡಗು ೧, ಬೆಳಗಾಂ ಕಂದಾಯ ವಿಭಾಗದಲ್ಲಿ ಬೆಳಗಾಂ ೨, ಬಿಜಾಪುರ ೧, ಧಾರವಾಡ ೧, ಗುಲ್ಬರ್ಗಾ ವಿಭಾಗದಲ್ಲಿ ಬೀದರ್ ೪, ಈ ರೀತಿಯಾಗಿ ಅನಧಿಕೃತವಾದಂಥ ನಿವೇಶನಗಳನ್ನು ತೆಗೆದುಕೊಳ್ಳಾಕಿದ್ದೇವೆ.

ಶ್ರೀ ಬಿ. ಎಂ. ಇದಿನಬ್ಬ.— ಅಧ್ಯಕ್ಷರೇ, ಇದು ಬಹಳ ಪ್ರಾಮುಖ್ಯವಾದಂಥ ಪ್ರಶ್ನೆ ಆದ್ದರಿಂದ ಉಪಪ್ರಶ್ನೆಯನ್ನು ನಾನು ಕೇಳುತ್ತಿದ್ದೇನೆ. ವಕ್ಫ್ ಸಂಸ್ಥೆ ಇವೊತ್ತು ನಿರ್ಜೀವವಾಗಿದೆ; ಅಲ್ಲಿರುವವರು ಯಾವ ಕೆಲಸವನ್ನೂ ಮಾಡುತ್ತಿಲ್ಲ. ಮಾನ್ಯ ಮಲ್ಲಾರಿಗೌಡರು ಕಳೆದ ಸಾರಿ ಇದೇ ಪ್ರಶ್ನೆಯನ್ನು ಕೇಳಿದ್ದರು. ಅಲ್ಪ ಸಂಖ್ಯಾತರಿಗೆ ಈ ವಕ್ಫ್‌ನಿಂದ ನ್ಯಾಯ ದೊರಕುತ್ತಿಲ್ಲ. ಆದ್ದರಿಂದ ಈ ಅಲ್ಪ ಸಂಖ್ಯಾತರ ವರ್ಗಕ್ಕೆ ಈ ವಕ್ಫ್ ಮಂಡಲಿಯಿಂದ ನ್ಯಾಯ ದೊರಕಂವ ಹಾಗೆ ಮಾಡಲೇಬೇಕು ಎಂದೂ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್.— ನಮಗೆ ಸದಸ್ಯರ ಕಳಕಳಿ ಅರ್ಥವಾಗಿದೆ. ಇದು ಅಲ್ಪ ಸಂಖ್ಯಾತರ ಪ್ರಶ್ನೆ ಒಂದೇ ಅಲ್ಲ, ಧಾರ್ಮಿಕವಾಗಿರತಕ್ಕಂಥದ್ದರಲ್ಲಿ ಧರ್ಮದ ಹೆಸರಿನಲ್ಲಿ ಶೋಷಣೆ ಮಾಡತಕ್ಕಂಥ ವಿಶಿಷ್ಟ ಹಿತಾಸಕ್ತಿಗಳು ಸಮಾಜದಲ್ಲಿವೆ. ಅವರ ಬಗ್ಗೆ ಸರ್ಕಾರದವರು ಶೀಘ್ರ ಕ್ರಮ ತೆಗೆದು ಕೊಳ್ಳುತ್ತಾರೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.— ಇದುವರೆಗೂ ನೀವು ಎಷ್ಟು ಜನರ ಜೊತೆಯಲ್ಲಿ ಪತ್ರವ್ಯವಹಾರವನ್ನು ಮಾಡಿದ್ದೀರಿ. ಹೋದಸಲ ಸದನಲ್ಲಿ ಭರವಸೆಯನ್ನು ಕೊಟ್ಟಿದ್ದೀರಿ. ಎರಡು ಮೂರು ತಿಂಗಳಲ್ಲಿ ಉಚ್ಚನ್ಯಾಯಾಲಯದ ನಿವೃತ್ತಿ ನ್ಯಾಯಾಧೀಶರಿಂದ ಇದರ ಬಗ್ಗೆ ಎನ್‌ಕ್ವೈರಿ ಮಾಡಿಸುತ್ತೇನೆ ಎಂದು ಹೇಳಿದ್ದಿರಿ. ಇಲ್ಲಿಯವರೆಗೂ ಇದು ಏತಕ್ಕೆ ಆಗಿಲ್ಲ. ಇದಕ್ಕೆ ಕಾರಣವೇನು ? ನೀವು ಬೆಂಗಳೂರಿನಲ್ಲಿ ವಿಂಡ್ಸರ್ ಮ್ಯಾನರ್ ಜಾಗವನ್ನು ಎಷ್ಟು ಬಾಡಿಗೆಗೆ ಕೊಟ್ಟಿದ್ದೀರಿ ? ಅಂಥ ಒಂದು ಒಳ್ಳೆಯ ಜಾಗವನ್ನು ೧೫೦ ರೂಪಾಯಿ ಬಾಡಿಗೆ ಕೊಟ್ಟಿದ್ದೀರಿ ಇಂಥ ಪರಿಸ್ಥಿತಿ ಇದ್ದಾಗ ಸರ್ಕಾರವಾದರೂ ಏತಕ್ಕೆ ಇರಬೇಕು ? ಅದರ ಬಗ್ಗೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ ?

ಶ್ರೀ ಎಂ. ಪಿ. ಪ್ರಕಾಶ್.— ಕಳೆದ ಬಾರಿ ಈ ಸದನದಲ್ಲಿಯೇ ಈ ಪ್ರಶ್ನೆಯನ್ನು ಕೇಳಿದ್ದರು, ಇದು ಬಹಳ ಉತ್ತಮವಾದಂಥ ಪ್ರಶ್ನೆ, ಇದನ್ನು ತೀವ್ರವಾಗಿ ಗಣನೆಗೆ ತೆಗೆದುಕೊಂಡಿದ್ದೆವು ಏತಕ್ಕೆ ವಿಳಂಬವಾಗಿದೆ ಎಂದೂ ವಿವರವನ್ನು ಕೊಟ್ಟಿದ್ದೇನೆ. ಮತ್ತು ಯಾರ್ಯಾರನ್ನು ಸಂಪರ್ಕ ಮಾಡಿದ್ದರು, ಎಷ್ಟು ಜನರ ಹತ್ತಿರ ಪತ್ರ ವ್ಯವಹಾರವನ್ನು ಮಾಡಿದ್ದಾರೆ, ಅವೆಲ್ಲವನ್ನೂ ಮಾನ್ಯ ಅಬ್ದುಲ್ ನಜೀರ್ ಸಾಬ್‌ರವರಿಗೆ ಹೇಳುತ್ತೇನೆ, ಆ ವಿವರಗಳನ್ನು ಅವರು ಕೊಡುತ್ತಾರೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.— ನ್ಯಾಯಾಧೀಶರನ್ನು ನೇಮಕಾತಿ ಮಾಡುತ್ತೇವೆಂದು ಹೇಳಿದ್ದೀರಿ, ಎಷ್ಟು ದಿವಸದಲ್ಲಿ ಮಾಡುತ್ತೀರಿ, ಎಷ್ಟು ದಿವಸದಲ್ಲಿ ಈ ವರದಿಯನ್ನು ಕೊಡುತ್ತೀರಿ ?

ಶ್ರೀ ಎಂ. ಪಿ. ಪ್ರಕಾಶ್.— ಸಚಿವರು ಬಂದಾಗ ಅದರ ಬಗ್ಗೆ ತಿಳಿಸುತ್ತಾರೆ.